Teachingninja.in

Latest Govt Job updates

Private Job updates

Free Mock tests available

Visit - teachingninja.in

# KPSC
# KAS

## Previous Year Paper
### Mains Qualifying
### Kannada 2015

Teachingninja.in

# QCA : 27

# QUALIFYING KANNADA

## ಅರ್ಹತಾನಿರ್ಧಾರಕ ಕನ್ನಡ

**Time : 2 hours** | **Maximum Marks : 150**

ಸಮಯ : **2** ಗಂಟೆಗಳು | ಗರಿಷ್ಠ ಅಂಕಗಳು: **150**

SECTION - A/ ವಿಭಾಗ -A

1. ಈ ಕೆಳಗಿನ ಯಾವುದಾದರೂ ಒಂದು ವಿಷಯದ ಬಗ್ಗೆ ಸುಮಾರು *350* ಶಬ್ದಗಳಲ್ಲಿ ಒಂದು ಪ್ರಬಂಧ ಬರೆಯಿರಿ. [25]

(a) ಜಲ ಸಾಕ್ಷರತೆ

(b) ಸುದ್ದಿ ಮಾಧ್ಯಮಗಳ ಮೇಲೆ ನಿಯಂತ್ರಣ

(c) ಪ್ರಾಥಮಿಕ ವಿದ್ಯಾಭ್ಯಾಸ ಮತ್ತು ಇಂಗ್ಲೀಷ್ ಮಾಧ್ಯಮ

(d) ಅಚರಣೆ ಮತ್ತು ನಂಬಿಕೆ

ಕೆಳಗೆ ನೀಡಿರುವ ಅಂಕಣದಲ್ಲಿ ಸ್ಪಷ್ಟವಾಗಿ ನೀವು ಆರಿಸಿರುವ ಪ್ರಬಂಧದ ವಿಷಯವನ್ನು ಬರೆಯಿರಿ

| | |
|---|---|
| ಪ್ರಬಂಧದ ವಿಷಯ | |

ನೀವು ಆರಿಸಿರುವ ಪ್ರಬಂಧವನ್ನು ಇಲ್ಲಿಂದ ಬರೆಯಲು ಆರಂಭಿಸಿ :-

Teachingninja.in

2. ಸೂಚನೆ : ಈ ಕೆಳಗಿನ ಗದ್ಯಭಾಗವನ್ನು ಗಮನವಿಟ್ಟು ಓದಿ ಕೊನೆಯಲ್ಲಿರುವ ಪ್ರಶ್ನೆಗಳಿಗೆ ನಿಮ್ಮ ಮಾತುಗಳಲ್ಲಿ ಉತ್ತರಿಸಿ :

ಕರ್ನಾಟಕದಲ್ಲಿ ಪ್ರಾಚೀನ ಕಾಲದಿಂದಲೂ ಕೆರೆಗಳು ಅಸ್ತಿತ್ವದಲ್ಲಿವೆ. ಕೃಷಿಗೆ ಕೆರೆ, ಇನ್ನಿತರ ನೀರಿನ ಬಳಕೆಗೆ ಬಾವಿ, ಕಲ್ಯಾಣಿ ಇತ್ಯಾದಿಗಳು ಮೊದಲಿನಿಂದಲೂ ನಿರ್ಮಾಣವಾಗುತ್ತಿದ್ದವು. ನದಿಗಳ ನೀರನ್ನು ಕೃಷಿಗೆ ಬಳಸಲಾಗುತ್ತಿತ್ತು. 'ಕಾಯ ಕಾಲುವೆ' 'ಬಸವಣ್ಣ ಕಾಲುವೆ' ಇತ್ಯಾದಿ ಕಾಲುವೆಗಳು ವಿಜಯನಗರದ ಅರಸರು ನಿರ್ಮಿಸಿದ ನೀರಾವರಿ ಸೌಕರ್ಯಗಳು. 20ನೇ ಶತಮಾನದ ಪೂರ್ವಾರ್ಧದಲ್ಲಿ ಆಗಿನ ಮೈಸೂರು ಸರ್ಕಾರ ಅನೇಕ ಬೃಹತ್ ಮತ್ತು ಮಧ್ಯಮ ನೀರಾವರಿ ಯೋಜನೆಗಳನ್ನು ಆರಂಭಿಸಿತು. ಅದರ ಫಲವಾಗಿಯೇ ಕೃಷ್ಣರಾಜಸಾಗರ, ಭದ್ರಾ, ವಾಣಿವಿಲಾಸ ಸಾಗರ ಅಣೆಕಟ್ಟುಗಳು ನಿರ್ಮಾಣವಾದವು. ಬ್ರಿಟಿಷ್ ಸರ್ಕಾರವು ರಾಜ್ಯ ರಾಜ್ಯಗಳ ನಡುವೆ ಆರೋಗ್ಯಕರ ನೀರಾವರಿ ವ್ಯವಸ್ಥೆಯನ್ನು ರೂಪಿಸುವ ಸಲುವಾಗಿ 'ನೀರಾವರಿ ಆಯೋಗ', 'ನೀರಾವರಿ ಮಂಡಳಿ'ಗಳನ್ನು ಸ್ಥಾಪಿಸಿತು. ಸ್ವಾತಂತ್ರ್ಯಾನಂತರವೂ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ನೀರಾವರಿ ವಿಷಯದಲ್ಲಿ ಆಸಕ್ತಿ ವಹಿಸಿವೆ. ಬರದ ಪರಿಣಾಮವನ್ನು ನಿಗ್ರಹಿಸುವ ಸಲುವಾಗಿ ನೀರಾವರಿ ಯೋಜನೆಗಳಿಗೆ ಪ್ರಾಶಸ್ತ್ಯ ದೊರೆತಿದೆ. 1950ರಿಂದ 1986ರ ವರೆಗೆ ಸುಮಾರು 36 ವರ್ಷಗಳ ಅವಧಿಯಲ್ಲಿ ಪಂಚವಾರ್ಷಿಕ ಯೋಜನೆಗಳ ಅಡಿಯಲ್ಲಿ ಕರ್ನಾಟಕ ಸರ್ಕಾರ ಕೈಗೆತ್ತಿಕೊಂಡಿರುವ ಬೃಹತ್ ಮತ್ತು ಮಧ್ಯಮ ನೀರಾವರಿ ಯೋಜನೆಗಳ ಸಂಖ್ಯೆ 51. ಅವುಗಳಲ್ಲಿ 26 ಯೋಜನೆಗಳು ಮುಕ್ತಾಯಗೊಂಡಿದ್ದು, ಇನ್ನೂ 25 ಯೋಜನೆಗಳು ನಿರ್ಮಾಣದ ವಿವಿಧ ಹಂತಗಳಲ್ಲಿವೆ. ಇವುಗಳೆಲ್ಲವೂ 2001 ನೆಯ ಇಸವಿಯೊಳಗೆ ಮುಗಿಯಲೇ ಬೇಕಾಗಿದೆ. ಇವುಗಳಲ್ಲಿ ಅತಿ ದೊಡ್ಡದೆಂದರೆ ಕೃಷ್ಣಾ ಮೇಲ್ದಂಡೆ ಯೋಜನೆ. ಈ ಯೋಜನೆಯ ಮೊದಲಿನ ಹಂತದ ಕೆಲಸಗಳಿಗೆ ವಿಶ್ವಬ್ಯಾಂಕಿನ ಸಹಾಯ ದೊರೆತಿದೆ. ಕೃಷ್ಣಾ ಮೇಲ್ದಂಡೆ ಯೋಜನೆಯ ಬಗ್ಗೆ ಕರ್ನಾಟಕ ಸರ್ಕಾರ ನಿರ್ಲಕ್ಷ್ಯದಿಂದಿದೆ ಎಂಬ ಕಾರಣದಿಂದಲೇ ಗುಲ್ಬರ್ಗಾ ಮತ್ತು ರಾಯಚೂರು ಜಿಲ್ಲೆಯ ಜನತೆಗೆ ಅಸಮಾಧಾನವಿದೆ. 2001ರ ವೇಳೆಗೆ ಕರ್ನಾಟಕ ಸರ್ಕಾರ ಕೃಷ್ಣಾ ನದಿಯ ಎಷ್ಟು ನೀರನ್ನು ಬಳಸಿಕೊಳ್ಳುತ್ತದೆಯೋ ಅಷ್ಟರ ಮೇಲಿನ ಅಧಿಕಾರವನ್ನು ಮಾತ್ರ ಮುಂದೆ ಹೊಂದಿರುತ್ತದೆ. ಇದು ಬಚಾವತ್ ಆಯೋಗದ ತೀರ್ಪು. ಕೃಷ್ಣಾ ನದಿಯ 734 ಟಿ.ಎಂ.ಸಿ. ನೀರನ್ನು ಬಳಸಿಕೊಳ್ಳಲು ಕರ್ನಾಟಕಕ್ಕೆ ಅವಕಾಶವಿದೆ. ಇದು 2001ರ ಒಳಗೆ ಆಗಬೇಕು.

ಕರ್ನಾಟಕದಲ್ಲಿ ಅತಿ ಹೆಚ್ಚು ಬಾವಿಗಳಿರುವುದು ಬೆಳಗಾವಿ ಜಿಲ್ಲೆಯಲ್ಲಿ, ನಂತರದ ಸ್ಥಾನ ಕೋಲಾರ ಮತ್ತು ಬಿಜಾಪುರ ಜಿಲ್ಲೆಗಳಿಗೆ. ಭೂಮಿಯ ಅಂತರ್ಜಲವನ್ನು ಆಧರಿಸಿ ನಿರ್ಮಿತವಾಗಿರುವ ಬಾವಿಗಳು ಅಂತರ್ಜಲದ ಪ್ರಮಾಣ ಕುಸಿಯುತ್ತಿದ್ದಂತೆಯೇ ನಿರುಪಯುಕ್ತವಾಗುತ್ತವೆ. ಈಗ ತೆರೆದ ಬಾವಿಗಳಿಗಿಂತ ಕೊಳವೆ ಬಾವಿಗಳಿಗೆ ಆದ್ಯತೆ ಹೆಚ್ಚಿದೆ. ಅಂತರ್ಜಲದ ಮಟ್ಟ ಕುಸಿದ ಕಾರಣದಿಂದಲೇ ಕೊಳವೆ ಬಾವಿಗಳು ಹೆಚ್ಚು ಉಪಯುಕ್ತವಾಗುತ್ತಿವೆ. ಈಗಿನಂತೆಯೇ ಅಂತರ್ಜಲದ ಮಟ್ಟ ಕಡಿಮೆಯಾಗುತ್ತಾ ಹೋದರೆ ಮುಂದೆ ಕೊಳವೆ ಬಾವಿಗಳೂ ನಿರುಪಯುಕ್ತವಾಗುತ್ತವೆ. ಆದ್ದರಿಂದ ಅಂತರ್ಜಲದ ಮಟ್ಟವನ್ನು ರಕ್ಷಿಸುವಲ್ಲಿ ಈಗ ಅತ್ಯಂತ ಎಚ್ಚರ ವಹಿಸಬೇಕಾಗಿದೆ.

Teachingninja.in

ಕೃಷಿ ಕ್ಷೇತ್ರದಲ್ಲಿ ಬಾವಿಯ ನಂತರದ ಸ್ಥಾನವನ್ನು ಕೆರೆಗಳು ಪಡೆಯುತ್ತವೆ. ಕೆಲವು ವರ್ಷಗಳಿಂದೀಚೆಗೆ ಕೆರೆಗಳೆಲ್ಲಾ ಹೂಳು ತುಂಬಿ, ಜೊಂಡು ಬೆಳೆದು ನೀರಿನ ಸಂಗ್ರಹಣಾ ಸಾಮರ್ಥ್ಯವೇ ನಶಿಸಿದೆ. ಈಗಲೂ ಅನೇಕ ಕೆರೆಗಳು ಪ್ರತಿ ವರ್ಷ ನಿರುಪಯುಕ್ತವಾಗುತ್ತಿವೆ. ನಗರ ಮತ್ತು ಪಟ್ಟಣ ಪ್ರದೇಶಗಳಲ್ಲಿದ್ದ ಅನೇಕ ಕೆರೆಗಳು ಈಗ ಮುಚ್ಚಿಹೋಗಿವೆ. ಒಂದು ಕಾಲಕ್ಕೆ ಊರಿನ ನಿರ್ಮಾಣದ ಜೊತೆಗೆ ಕೆರೆಯ ನಿರ್ಮಾಣವಾಗುತ್ತಿತ್ತು. ಕೆರೆಯಿಲ್ಲದ ಊರು ಅಪರೂಪವಾಗಿತ್ತು. ಈಗ ಕೆರೆಯನ್ನು ಮುಚ್ಚಿ ಊರಿನ ನಿರ್ಮಾಣವಾಗುವ ಪ್ರಸಂಗ ಬಂದಿದೆ. ಅಂತರ್ಜಾಲ ಮಟ್ಟ ಕುಸಿಯಲು ಇದೂ ಒಂದು ಕಾರಣ. ಕರ್ನಾಟಕದಲ್ಲಿ ಅತಿ ಹೆಚ್ಚು ಸಂಖ್ಯೆಯ ಕೆರೆಗಳು ಶಿವಮೊಗ್ಗ ಜಿಲ್ಲೆಯಲ್ಲಿದ್ದು, ಬೀದರ್ ಜಿಲ್ಲೆಯಲ್ಲಿ ಕೆರೆಗಳ ಸಂಖ್ಯೆ ಅತ್ಯಂತ ಕಡಿಮೆ ಇದೆ. ಇವುಗಳ ನಿರ್ಮಾಣ, ಪ್ರಾಮುಖ್ಯತೆ, ರಕ್ಷಣೆ, ನಿರ್ವಹಣೆಯ ಬಗ್ಗೆ ಯಾರೂ ಸರಿಯಾದ ಗಮನ ಹರಿಸುತ್ತಿಲ್ಲ ಎಂಬುದು ನೋವಿನ ಸಂಗತಿ. ಬ್ರಿಟಿಷರ ಕಾಲದಲ್ಲೂ ಕೆರೆಗಳ ನಿರ್ಮಾಣ ಮತ್ತು ನಿರ್ವಹಣೆ ಉತ್ತಮವಾಗಿಯೇ ಇತ್ತು. ಮಳೆಯ ನೀರನ್ನೇ ಆಶ್ರಯಿಸಿದ ಕೆರೆಗಳ ಬದಲಿಗೆ ಕ್ರಮೇಣ ಬಾವಿಗಳೇ ಹೆಚ್ಚು ಉಪಯುಕ್ತ ಎನಿಸಿದ ಕಾರಣದಿಂದಲೂ ಕೆರೆಗಳ ಉಸ್ತುವಾರಿಯ ಬಗೆಗೆ ಗಮನ ಕಡಿಮೆಯಾಯಿತು. ತಾಲ್ಲೂಕು ಅಭಿವೃದ್ಧಿ ಮಂಡಲಿ ಮತ್ತು ಲೋಕೋಪಯೋಗಿ ಇಲಾಖೆಗಳ ನಿಯಂತ್ರಣಕ್ಕೆ ಸೇರಿದ ಕೆರೆಗಳು ಕ್ರಮೇಣ ಉಪೇಕ್ಷೆಗೆ ಗುರಿಯಾಗಿವೆ. ಈಗ ಹೊಸದಾಗಿ ಕೆರೆಗಳನ್ನು ನಿರ್ಮಿಸುವುದು ನಿರುತ್ತೇಜಕ ಎನಿಸಿದರೆ, ಇರುವ ಕೆರೆಗಳನ್ನು ದುರಸ್ತಿ ಮಾಡಿ ಅವುಗಳ ಸದುಪಯೋಗ ಮಾಡಿಕೊಳ್ಳುವುದು ಯಾವ ರೀತಿಯಲ್ಲೂ ನಿರುತ್ತೇಜಕವಲ್ಲ.

ಈ ನಿಟ್ಟಿನಲ್ಲಿ ಸಂಬಂಧಿಸಿದ ಇಲಾಖೆಗಳು ತೀವ್ರವಾಗಿ ಗಮನ ಹರಿಸಬೇಕಾದ್ದು ಅನಿವಾರ್ಯ. ಹೂಳು ತೆಗೆಸಿ ಜೊಂಡನ್ನು ನಿರ್ಮೂಲ ಮಾಡಿ ಮಳೆಗಾಲದಲ್ಲಿ ಹರಿದು ಬರುವ ನೀರನ್ನು ಹೆಚ್ಚು ಪ್ರಮಾಣದಲ್ಲಿ ಸಂಗ್ರಹಿಸಿ ಹೆಚ್ಚು ಕಾಲ ಬಳಕೆಗೆ ಬರುವಂತೆ ಏರ್ಪಾಡಾದರೆ ಗ್ರಾಮೀಣ ಪ್ರದೇಶದಲ್ಲಿ ಕೃಷಿಗೆ ಹೆಚ್ಚು ಉಪಯೋಗವಾಗುತ್ತದೆ. ಎಲ್ಲಾ ಪ್ರದೇಶಗಳಿಗೂ ನದಿಯ ಸೌಲಭ್ಯ ದೊರೆಯುವುದು ಅಸಾಧ್ಯದ ಮಾತು. ಬೃಹತ್ ಮತ್ತು ಮಧ್ಯಮವರ್ಗದ ನೀರಾವರಿ ಯೋಜನೆಗಳ ಜೊತೆಜೊತೆಗೆ ಸಣ್ಣ ಪ್ರಮಾಣದ ನೀರಾವರಿ ಯೋಜನೆಗಳ ಬಗೆಗೂ ಸರ್ಕಾರ ಗಮನ ಹರಿಸಬೇಕಾದ್ದು ಅವಶ್ಯಕ. ಈ ವಿಷಯದಲ್ಲಿ ಇಂದಿನ ಉಪೇಕ್ಷೆ ಮುಂದೆ ಘೋರ ವಿಪತ್ತಿಗೆ ಕಾರಣವಾಗುವುದರಲ್ಲಿ ಸಂಶಯವಿಲ್ಲ. ಕೃಷಿಯ ಮಾತು ಹಾಗಿರಲಿ, ಕುಡಿಯುವ ನೀರಿಗೂ ಹಾಹಾಕಾರ ಪಡುವಂತಹ ಸ್ಥಿತಿ ಈಗಾಗಲೇ ಸೃಷ್ಟಿಯಾಗಿ ನಿರಂತರ ಬರಗಾಲವನ್ನು ಎದುರುಗೊಳ್ಳಬೇಕಾಗಿದೆ. ಈಚೆಗೆ ಕೆಲವು ಸ್ವಯಂಸೇವಾ ಸಂಸ್ಥೆಗಳು ಕೆರೆಗಳ ಸಂರಕ್ಷಣೆಯ ಬಗೆಗೆ ಗಮನ ಹರಿಸಿರುವುದು ಸ್ತುತ್ಯಾರ್ಹವಾಗಿದೆ. ಎಲ್ಲಾ ವಿಷಯಗಳಿಗೂ ಸರ್ಕಾರವನ್ನೇ ಅವಲಂಬಿಸುವ ಬದಲು ಜನತೆ ಸ್ವಯಂಸೇವಾ ಸಂಸ್ಥೆಗಳ ಮೂಲಕ ಸಹಕಾರ ತತ್ವದ ಆಧಾರದ ಮೇಲೆ ತಮಗೆ ಅತ್ಯವಶ್ಯಕವಾದ ಸೌಲಭ್ಯಗಳನ್ನು ತಾವೇ ಒದಗಿಸಿಕೊಳ್ಳಬೇಕಾದ ಸಮಯ ಬಂದಿದೆ.

Teachingninja.in

ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ : [5X5=25]

(a) ಕೃಷಿ ಮತ್ತು ಇನ್ನಿತರ ನೀರಿನ ಬಳಕೆಗೆ ಪ್ರಾಚೀನ ಕಾಲದಿಂದ ಬಳಕೆಯಲ್ಲಿದ್ದ ನೀರಿನ ಆಶ್ರಯಗಳಾವುವು? ಅವುಗಳನ್ನು ಪೂರೈಸಿದ ಯೋಜನೆಗಳಾವುವು? ತಿಳಿಸಿ

(b) ಪಂಚವಾರ್ಷಿಕ ಯೋಜನೆಗಳಡಿಯಲ್ಲಿ ಕರ್ನಾಟಕದಲ್ಲಿ ಎಷ್ಟು ನೀರಾವರಿ ಯೋಜನೆಗಳು ರೂಪಿತಗೊಂಡವು? ಅವುಗಳಲ್ಲಿ ಕಾರ್ಯಗತಗೊಂಡವೆಷ್ಟು? ವಿವರಿಸಿ.

(c) ಬಚಾವತ್ ಆಯೋಗದ ತೀರ್ಪು ಏನಾಗಿತ್ತು? ಅದರ ಮುಖ್ಯಾಂಶಗಳನ್ನು ತಿಳಿಸಿ.

(d) ತೆರೆದ ಬಾವಿ ಮತ್ತು ಕೊಳವೆ ಬಾವಿಗಳು ನೀರಿನ ಅವಶ್ಯಕತೆಗಳನ್ನು ಪೂರೈಸಿದ್ದ ಪ್ರಮುಖ ಜಿಲ್ಲೆಗಳಾವುವು? ಇವು ನಿರುಪಯುಕ್ತಗೊಳ್ಳಲು ಕಾರಣಗಳೇನು ತಿಳಿಸಿ.

(e) ವರ್ತಮಾನದಲ್ಲಿ ಎದುರಿಸುತ್ತಿರುವ ನಿರಂತರ ಬರಗಾಲಕ್ಕೆ ಕೆರೆಗಳ ನಿರ್ವಹಣೆಯಲ್ಲಿ ತಳೆದ ಉಪೇಕ್ಷೆಯೇ ಕಾರಣ ಎಂಬುದನ್ನು ವಿವರಿಸಿ.

Teachingninja.in

Teachingninja.in

ಸಂಕ್ಷಿಪ್ತ ಲೇಖನ / (Précis Writing)

3. ಈ ಕೆಳಗಿನ ಗದ್ಯಭಾಗದ ಸಾರವನ್ನು ನಿಮ್ಮ ಸ್ವಂತ ಮಾತುಗಳಲ್ಲಿ *100* ಶಬ್ದಗಳಿಗೆ ಮೀರದಂತೆ ಸಂಗ್ರಹಿಸಿ ಬರೆಯಿರಿ. ಲೇಖನದ ಕೊನೆಯಲ್ಲಿ ನೀವು ಬಳಸಿರುವ ಶಬ್ದಗಳ ಸಂಖ್ಯೆಯನ್ನು ಸೂಚಿಸಿ. **[25]**

ವಿ.ಸೂ.: ಲೇಖನ ಸಂಗ್ರಹವು ಸೂಚಿಸಿರುವುದಕ್ಕಿಂತ ಹೆಚ್ಚು ಅಥವಾ ಕಡಿಮೆ ಇದ್ದರೆ ಅಂಕಗಳನ್ನು ಕಳೆಯಲಾಗುವುದು.

ಪರಿಗ್ರಹವೆಂದರೆ ನಾಳೆಗಾಗಿ ಕಾದಿರಿಸುವುದು. ಸತ್ಯಶೋಧಕ, ಪ್ರೇಮ ಪಂಥಿ ನಾಳೆಗಾಗಿ ಏನನ್ನೂ ಕೂಡಿಡುವಂತಿಲ್ಲ. ಪರಮಾತ್ಮ ನಾಳೆಗಾಗಿ ಏನನ್ನೂ ತೆಗೆದಿಡುವುದಿಲ್ಲ. ಆ ಗಳಿಗೆಗೆ ಎಷ್ಟು ಬೇಕೋ ಅಷ್ಟಕ್ಕಿಂತ ಹೆಚ್ಚಾಗಿ ಎಂದೂ ಆತ ಸೃಷ್ಟಿಸುವುದಿಲ್ಲ. ಆದಕಾರಣ ನಾವು ಆತನಲ್ಲಿ ನಂಬಿಕೆ ಇಟ್ಟಿದ್ದಲ್ಲಿ ನಮಗೆ ಅನುದಿನವೂ ಆತ ಕೂಳು ಕೊಟ್ಟಾನೆಂದು, ಅಂದರೆ ನಮಗೆ ಬೇಕಾದುದೆಲ್ಲವನ್ನೂ ಇತ್ತಾನೆಂದು ನೆಮ್ಮದಿಯಿಂದಿರಬೇಕು. ಅಂಥ ನಂಬಿಕೆಯಿಂದ ಬದುಕಿದ ಸಂತರು - ಭಕ್ತರೆಲ್ಲ ತಮ್ಮ ಅನುಭವದಲ್ಲಿ ಇದಕ್ಕೆ ಸಮರ್ಥನೆ ಕಂಡುಕೊಂಡಿದ್ದಾರೆ.

ಅನುದಿನವೂ ಮನುಷ್ಯನಿಗೆ ಅವನ ನಿತ್ಯದ ಊಟವನ್ನು ಮಾತ್ರ ಕೊಡುವ ಈಶ್ವರೀ ನಿಯಮವನ್ನು ನಾವು ಅರಿತಿಲ್ಲ. ಅರಿತಿದ್ದರೂ ಅಸಡ್ಡೆ ಮಾಡಿದ್ದೇವೆ. ಅಂತಲೇ ಅಸಮತೆಗೆ ಆಸ್ಪದವಾಗಿದೆ. ಅದರಿಂದ ಸಾವಿರ ಸಂಕಟ-ದುಃಖ ಹುಟ್ಟಿಬಂದಿವೆ. ಶ್ರೀಮಂತರ ಬಳಿ ಅವರಿಗೆ ಅಗತ್ಯವಿಲ್ಲದ ಎಷ್ಟೋ ಪದಾರ್ಥ ಕಿಕ್ಕಿರಿದು ತುಂಬಿದೆ. ಅವೆಲ್ಲ ಅತ್ತ ಬಿಸುಟು ಇತ್ತ ಎಸೆದು ಹಾಳಾಗಿ ಹೋಗುತ್ತದೆ. ಆ ಪದಾರ್ಥಗಳ ಅಭಾವದಿಂದ ಇತ್ತ ಕೋಟ್ಯಾಂತರ ಜನ ಕೂಳಿಲ್ಲದೆ ಸಾಯುತ್ತಾರೆ. ಪ್ರತಿಯೊಬ್ಬರೂ ತನಗೆ ಬೇಕಾದಷ್ಟನ್ನು ಮಾತ್ರ ಇಟ್ಟುಕೊಂಡರೆ ಯಾರಿಗೂ ಕೊರತೆಯಾಗದು. ಎಲ್ಲರೂ ತೃಪ್ತಿಯಿಂದ ಬದುಕಬಹುದು. ಇಂದು ಶ್ರೀಮಂತರೂ ಅತೃಪ್ತಿಯಲ್ಲಿ ಬಡವರಿಗಿಂತಲೂ ಕಡಿಮೆಯಿಲ್ಲ. ಬಡವ ಲಕ್ಷಾಧಿಪತಿಯಾಗಬೇಕೆಂದು ಆಸೆಪಡುತ್ತಾನೆ, ಲಕ್ಷಾಧಿಪತಿ ಕೋಟೀಶ್ವರನಾಗಬೇಕೆಂದು ಬಯಸುತ್ತಾನೆ. ತೃಪ್ತಿಭಾವ ವಿಶ್ವವ್ಯಾಪಿಯಾಗಿ ಹಬ್ಬುವಂತೆ ಮಾಡಲೋಸುಗ ಶ್ರೀಮಂತರ ಅಪರಿಗ್ರಹ ಕೈಗೊಳ್ಳಲು ಅಭಿಕ್ರಮಿಸಬೇಕು. ಅವರು ತಮ್ಮ ಆಸ್ತಿಪಾಸ್ತಿಯನ್ನು ಸಾಮಾನ್ಯ ಮಿತಿಯೊಳಗೆ ಇಟ್ಟುಕೊಂಡಿದ್ದಾದರೆ ಕೂಳಿಲ್ಲದವರಿಗೆ ಸುಲಭವಾಗಿ ಊಟ ಸಿಕ್ಕೀತು, ಧನಿಕರೊಂದಿಗೆ ಅವರೂ ತೃಪ್ತಿಯ ಪಾಠ ಕಲಿತಾರು.

ಅಪರಿಗ್ರಹದ ಆದರ್ಶದ ಪೂರ್ಣ ಸಾಧನೆಯಾದಾಗ ಮನುಷ್ಯನೂ ಹಕ್ಕಿಗಳಂತೆ ದಿಗಂಬರನಾಗಬೇಕಾಗುತ್ತದೆ. ನಿಲ್ಲಲು ನೆಲೆ, ಉಡಲು ಬಟ್ಟೆ, ಉಣಲು ನಾಳೆಗೆ ಹಿಟ್ಟು ಇಡಬಾರದು. ಅಂಥವನಿಗೆ ನಿತ್ಯ ಯಾತ್ರೆಗೆ ಬೇಕಾದ ಅನ್ನವನ್ನು ಭಗವಂತ ಒದಗಿಸುತ್ತಾನೆ. ಆ ಚಿಂತೆ ಅವನದು. ಈ ಅವಧೂತ ಅವಸ್ಥೆಯನ್ನು ಮುಟ್ಟುವವರು ಲೋಕದಲ್ಲಿ ಬಹಳ ವಿರಳ. ಆದರೆ ಸಾಧಾರಣ ತರದ ಸಾಧಕರಾದ ನಾವು ಅಸಾಧ್ಯವೆಂದು ತೋರುವುದಕ್ಕೆ ಬೆದರಬೇಕಾಗಿಲ್ಲ. ಈ ಆದರ್ಶವನ್ನು ಸದಾ ಲಕ್ಷ್ಯದಲ್ಲಿಟ್ಟು ದಿನದಿನವೂ ನಮ್ಮ ಪರಿಗ್ರಹವೃತ್ತಿಯನ್ನು ಪರೀಕ್ಷಿಸುತ್ತಾ ಅವನ್ನು ತಗ್ಗಿಸಲು ಪ್ರಯತ್ನಿಸಬೇಕು. ನಿಜವಾದ ಸಭ್ಯತೆಯ ಲಕ್ಷಣ ಅಗತ್ಯಗಳನ್ನು ಹೆಚ್ಚಿಸಿಕೊಳ್ಳುವುದಲ್ಲ . ವಿಚಾರಪೂರ್ವಕ, ಇಚ್ಛಾಪೂರ್ವಕ ಅವನ್ನು ತಗ್ಗಿಸಿಕೊಳ್ಳುವುದು. ಇದರಿಂದಲೇ ನಿಜವಾದ ಸುಖ-ತೃಪ್ತಿ ಹೆಚ್ಚುತ್ತದೆ. ನಮ್ಮ ಸೇವೆಯ ಸಾಮರ್ಥ್ಯ ಬೆಳೆಯುತ್ತದೆ.

**ಶೀರ್ಷಿಕೆ/Title** ..............................................................................................

Teachingninja.in

**4.** ಕೆಳಗಿನ ಗದ್ಯಭಾಗವನ್ನು ಕನ್ನಡಕ್ಕೆ ಭಾಷಾಂತರಿಸಿ. **[25]**

One of the greatest theoretical physicists of all time, Einstein is best known for the Theory of Relativity although the Nobel Prize was awarded for his work on the interpretation of Photoelectric effect. He revealed that it took him just five weeks to write his paper on Relativity in between his work as a clerk. On being asked to explain the Theory of Relativity, Einstein explained in his inimitable style, "When a man sits with a pretty girl for an hour it seems like a minute. But let him sit on a hot stove for a minute, it will seems like more than an hour. That is Relativity." He also remarked, "Since mathematicians have invaded the Theory of Relativity I do not understand it myself anymore!"

He was a simple and unassuming man to whom success. Luxury possessions and appearances were unimportant. He was often seen walking on the streets of Berne in green slippers without socks when appointed as the Dean of a university, it is said that he was asked to furnish a list of his requirements. His immediate demand was a wastepaper basket. On being asked the reason for this, his typical response later was "I commit mistakes you know."

Teachingninja.in

SECTION-B/ ವಿಭಾಗ-B

ಪತ್ರ ಲೇಖನ/ Letter Writing

5. ಕೆಳಗಿನ ಒಂದು ವಿಷಯವನ್ನು ಕುರಿತು *100* ಪದಗಳಲ್ಲಿ ಪತ್ರಿಕಾ ಸಂಪಾದಕರಿಗೆ ಒಂದು ಪತ್ರ ಬರೆಯಿರಿ : **[10]**

(a) ಭ್ರಷ್ಟಾಚಾರ ನಿರ್ವಹಣೆಯಲ್ಲಿ ಸರ್ಕಾರದ ಪಾತ್ರ

(b) ಮಳೆ ನೀರಿನ ಸದ್ಬಳಕೆ

(c) ಶಾಲಾಮಕ್ಕಳ ಪುಸ್ತಕದ ಹೊರೆಯನ್ನು ಕಡಿಮೆ ಮಾಡಬೇಕಾದ ಬಗೆಗೆ

ಕೆಳಗೆ ನೀಡಿರುವ ಅಂಕಣದಲ್ಲಿ ಸ್ಪಷ್ಟವಾಗಿ ನೀವು ಆರಿಸಿರುವ ಪತ್ರದ ವಿಷಯವನ್ನು ಬರೆಯಿರಿ

| | |
|---|---|
| ಪತ್ರದ ವಿಷಯ | |

ನೀವು ಆರಿಸಿರುವ ವಿಷಯವನ್ನು ಕುರಿತು ಪತ್ರವನ್ನು ಇಲ್ಲಿಂದ ಬರೆಯಲು ಆರಂಭಿಸಿ :-

**6.** ಕೆಳಗಿನವುಗಳಲ್ಲಿ ಎರಡರ ಅರ್ಥ ಸ್ವಾರಸ್ಯವನ್ನು ವಿವರಿಸಿ : **[2×5=10]**

(a) ದೇಶ ನೋಡು, ಕೋಶ ಓದು

(b) ಹತ್ತು ಕಟ್ಟುವ ಕಡೆ ಒಂದು ಮುತ್ತು ಕಟ್ಟು

(c) ಅಜ್ಜಿ ಇಲ್ಲದ ಮನೆ, ಮಜ್ಜಿಗೆ ಇಲ್ಲದ ಊಟ

(d) ಅಲ್ಪರ ಸಂಗ, ಅಭಿಮಾನ ಭಂಗ

**7.** ಕೆಳಗಿನ ನುಡಿಗಟ್ಟುಗಳಲ್ಲಿ ಎರಡರ ಅರ್ಥವನ್ನು ವಿವರಿಸಿ, ಅವುಗಳನ್ನು ನಿಮ್ಮ ಸ್ವಂತ ವಾಕ್ಯಗಳಲ್ಲಿ ಪ್ರಯೋಗಿಸಿ : **[2×2½=5]**

(a) ಕರುಳು ಕಿವುಚು

(b) ಕಣ್ಮಣಿಯಾಗು

(c) ಕಿವಿಕಚ್ಚು

(d) ಮಗ್ಗುಲ ಮುಳ್ಳು

(e) ಬೆಟ್ಟಕ್ಕೆ ಕಲ್ಲು ಹೊರು

Teachingninja.in

8. ಈ ಕೆಳಗಿನವುಗಳಲ್ಲಿ 5ಕ್ಕೆ ತತ್ಸಮ ರೂಪಗಳನ್ನು ಕೊಡಿ : [5×1=5]

(a) ಬಸದಿ (f) ಸಾಸಿರ

(b) ಬವರ (g) ಬಿಜ್ಜೆ

(c) ತದಿಗೆ (h) ಬಣ್ಣ

(c) ದಾಳಿಂಬೆ (i) ಹಕ್ಕಿ

(e) ಚಣ (j) ಹರೆಯ

9. ಕೆಳಗಿನವುಗಳಲ್ಲಿ 5ಕ್ಕೆ ತದ್ಭವ ರೂಪಗಳನ್ನು ನೀಡಿ : [5×1=5]

(a) ಪಕ್ಷ (f) ಮರುವಕ

(b) ಪಿಷ್ಟ (g) ಫಲಕ

(c) ಗೂರ್ಜರ (h) ಪ್ರಣತಿ

(d) ಪ್ರಜ್ವಲ (i) ಕಬಳ

(e) ಯಜ್ಞ (j) ಚಿತ್ರ

10. ಈ ಕೆಳಗಿನವುಗಳಲ್ಲಿ 5ಕ್ಕೆ ವಿರುದ್ಧಾರ್ಥಕ ಶಬ್ದ ತಿಳಿಸಿ : [5×1=5]

(a) ಆಗಮನ (f) ಗುಣಿ

(b) ಮೃದು (g) ದುರ್ಬಲ

(c) ಕ್ರೂರ (h) ಘನ

(d) ಉಪೇಕ್ಷೆ (i) ಸ್ಥಾವರ

(e) ಗಮ್ಯ (j) ರತಿ

11. ಈ ಕೆಳಗಿನ ವಾಕ್ಯಗಳಲ್ಲಿ ಕಂಡುಬರುವ ಕಾಗುಣಿತಾಕ್ಷರಗಳ ತಪ್ಪುಗಳನ್ನು ತಿದ್ದಿ ಬರೆಯಿರಿ : [5x2=10]

(a) ಈಬ್ಬರ ಮದ್ಯೆ ಯವ ಜಗಳವು ಇಲ್ಲ

(b) ಅವನು ಪ್ರಮಾನಿಕ, ಹಾದರೆ ಅವನು ವೃಧ್ದನಾಗಿದ್ದಾನೆ

(c) ಉಡುಗಿ ಕುಳ್ಳು ಹಾದರೂ ಶುಂದರವಾಗಿದ್ದಾಳೆ

(d) ವಿದ್ಯಾರ್ಥಿಗಳ ಅಸ್ತಕ್ಷೇಪ ಸೈಕ್ಷಣಿಕ ಸ್ವಾತಂತ್ರ್ಯಕ್ಕೆ ಹಪಾಯಕಾರಿ

(e) ಅವರ ಉತ್ತರ ನೆರವಾಗಿತ್ತು, ಪರದರ್ಶಕಾವಗಿತ್ತು

Teachingninja.in

Teachingninja.in